ಮೂಲ ದಾವೆ ನಂ.63/2021

DW-02

**<u>ದಿನಾಂಕಃ 19-01-2026.</u>**

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ SVK ಮಾನ್ಯ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಸಾಕ್ಷಿಯು ಯಾವುದೇ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ. ಪ್ರಸ್ತುತ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟಿ ಸವಾಲುಃ ವಾದಿಗಳ ಪರ ಮಾನ್ಯ ಶ್ರೀ SND ವಕೀಲರಿಂದಃ</u>**

ನಾನು ಕಳೆದ 6 ವರ್ಷಗಳಿಂದ CDPO ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನಮ್ಮ ತಂದೆಗೆ ನಾವು ಮೂರು ಜನ ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಮ್ಮ ಮಕ್ಕಳಲ್ಲಿ ಶ್ರೀ ಹನಮಂತ್ರಾಯ ಇವರ ಮದುವೆ ಮೊದಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ 1 ನೇ ವಾದಿಯ ಮದುವೆಯು ಸವದತ್ತಿಯ ಯಲ್ಲಮ್ಮ ದೇವಸ್ತಾದನಲ್ಲಾಗಿದ್ದು ನೀವು ಸದರಿ ಮದುಗೆ ಹೋಗಿರುತ್ತೀರಾ ಎಂದು ಹೇಳಿದ್ದಕ್ಕೆ ಸಾಕ್ಷಿ ಸದರಿ ಮದುವೆ ಸುಳ್ಳಾಗಿರುತ್ತದೆ ಎಂದು ಹೇಳುತ್ತಾರೆ. ನನಗೆ 1 ನೇ ವಾದಿಯ ಹೆಸರು, ಅವರ ಗಂಡನ ಹೆಸರು ಹಾಗೂ ಅವರ ಅಡ್ಡ ಹೆಸರು ಹೇಳಲು ಬರುವುದಿಲ್ಲ ಹಾಗೂ ಗೊತ್ತಿರುವುದಿಲ್ಲ.

3. ನನಗೆ 2 ಮತ್ತು 3 ನೇ ವಾದಿಗಳ ಹೆಸರು, ಅವರ ತಂದೆಯ ಹೆಸರು ಹಾಗೂ ಅವರ ಅಡ್ಡ ಹೆಸರು ಹೇಳಲು ಬರುವುದಿಲ್ಲ ಹಾಗೂ ಗೊತ್ತಿರುವುದಿಲ್ಲ. 1 ನೇ ವಾದಿಯ ಜೊತೆಗೆ ಬಂದ ಅವರು ನನ್ನ ತಾಯಿ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ 1 ನೇ ವಾದಿಯ ಗಂಡನ ಹೆಸರು ಹಾಗೂ ಅವರ

ಅಡ್ಡ ಹೆಸರು ಹಾಗೂ 2 ಮತ್ತು 3 ನೇ ವಾದಿಯ ತಂದೆಯ ಹೆಸರುಗಳನನ್ನು ಹಾಗೂ ಅವರ ಅಡ್ಡ ಹೆಸರುಗಳನ್ನು ನಮೂದು ಮಾಡಿರುವುದಿಲ್ಲ. ವಾದಿಗಳು ಯಾವ ಊರಿನಲ್ಲಿ ವಾಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ನನ್ನ ಮೃತ ತಮ್ಮ ಹನಮಂತ್ರಾಯ ಇವರು ಶೋರಾಪೂರ ಹಾಗೂ ಖಾನಾಪೂರದಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ ಹಾಗೂ ಪ್ರಭಾರದಲ್ಲಿ ಯಾದಗಿರಿಯ ನಗರಸಭೆಯಲ್ಲಿ ಸ್ವಲ್ಪ ದಿವಸ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ನಾನು ಸದರಿ ಶೋರಾಪೂರ, ಖಾನಾಪೂರ ಹಾಗೂ ಯಾದಗಿರಿಯಲ್ಲಿ ನನ್ನ ಸದರಿ ತಮ್ಮ ಕೆಲಸ ಮಾಡುತ್ತಿದ್ದಾಗ ಅವರ ಮನೆಗೆ ಹೋಗಿರುವುದಿಲ್ಲ. ನಾನು 1 ನೇ ವಾದಿಗೆ ಸಂಬಂಧಿಸಿದ ಆಧಾರ ಕಾರ್ಡನ್ನು ಪರಿಶೀಲನೆ ಮಾಡಿರುವುದಿಲ್ಲ ಸಾಕ್ಷಿ ಮುಂದುವರೆದು ಸದರಿಯವರು ತಮ್ಮ ಆಧಾರ ಕಾರ್ಡ ನ್ನು ಸೃಷ್ಟಿ ಮಾಡಿರುವುದಾಗಿ ಹೇಳುತ್ತಾರೆ. ನಾನು 2 ಮತ್ತು 3 ನೇ ವಾದಿಗಳ ಶಾಲಾ ದಾಖಲೆಗಳನ್ನೂ ಕೂಡಾ ಪರಿಶೀಲನೆ ಮಾಡಿರುವುದಿಲ್ಲ. 2 ಮತ್ತು 3 ನೇ ವಾದಿಗಳ ಶಾಲಾ ದಾಖಲೆಗಳನ್ನೂ ಕೂಡಾ ಸೃಷ್ಟಿ ಮಾಡಲಾಗಿರುತ್ತವೆ. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ 1 ನೇ ವಾದಿಯು ತಮ್ಮ ಆದಾರ ಕಾರ್ಡ ನ್ನು ಹಾಗೂ 2 ಮತ್ತು 3 ನೇ ವಾದಿಗಳ ಶಾಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ನನಗೆ ತಿಳಿದು ಬಂದಿರುತ್ತದೆ. ನಾನು ನಮ್ಮ ಮಾನ್ಯ ವಕೀಲರ ಮುಖಾಂತರ ವಾದಿಗಳ ಸದರಿ ದಾಖಲೆಗಳನ್ನು ಪರಿಶೀಲನೆ ಮಾಡಿಸಿರುತ್ತೇನೆ. ಕಳೆದ 2 ವರ್ಷಗಳ ಹಿಂದೆ ವಾದಿಗಳು ಸದರಿ ದಾಖಲೆಗಳನ್ನು ಸೃಷ್ಟಿ

ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರ ನಾನು 1 ನೇ ಪ್ರತಿವಾದಿಯೊಂದಿಗೆ ನಮ್ಮ ಮಾನ್ಯ ವಕೀಲರ ಕಚೇರಿಗೆ 4-5 ಬಾರಿ ಹೋಗಿರುತ್ತೇನೆ. ನಾನು ಮಾನ್ಯ ವಕೀಲರ ಕಚೇರಿಗೆ ಸದರಿ ಸಂದರ್ಭದಲ್ಲಿ ದಾಖಲೆಗಳನ್ನು ಪೂರೈಸಲು ಹಾಗೂ ತಕರಾರುಗಳನ್ನು ಸಲ್ಲಿಸಲು ಮಾಹಿತಿಯನ್ನು

ಕೊಡಲು ಹೋಗಿರುತ್ತೇನೆ. ವಾದಿಗಳು ಯಾವ ರೀತಿಯಾಗಿ ಸದರಿ ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ ಆದರೆ ಅವುಗಳನ್ನು ನೋಡಿದರೆ ಫೋರ್ಜರಿ ಮಾಡಿರುತ್ತಾರೆ ಎಂದು ಹೇಳಬಹುದು. ವಾದಿಗಳು ಸದರಿ ದಾಖಲೆಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದು ಹೇಳಲು 1 ನೇ ಪ್ರತಿವಾದಿಯಾಗಲೀ ಅಥವಾ ನಾನಾಗಲೀ ಅವರ ವಿರುದ್ಧ ಯಾವುದೇ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಗೆ ಈಗ ಪ್ರಕರಣದ ಕಡತಗಳನ್ನು ತೋರಿಸಿ ಯಾವ ದಾಖಲೆಗಳನ್ನು ವಾದಿಗಳು ಫೋರ್ಜರಿ ಮಾಡಿರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ಎಲ್ಲಾ ದಾಖಲೆಗಳು  ಎಂದು ಹೇಳುತ್ತಾರೆ. ವಾದಿಗಳು ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಾನ್ಯ ವಕೀಲರಿಗೆ ಪ್ರಸ್ತುತ ಪ್ರಕರಣಕ್ಕಾದಂತೆ ಕೆಲವೊಂದು ನಿರ್ದೇಶಗಳನ್ನು ಕೊಟ್ಟಿರುತ್ತೇನೆ ಎಂದರೆ ಸರಿ. 1 ನೇ ವಾದಿ ನನ್ನ ಮೃತ ತಮ್ಮ ಇವರ ಮೊದಲನೇ ಹೆಂಡತಿ ಹಾಗೂ 2 ಮತ್ತು 3 ನೇ ವಾದಿಗಳು ಅವರ ಮಕ್ಕಳಾಗಿರುತ್ತಾರೆ ಎಂದು ನನಗೆ ಗೊತ್ತಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಸಹೋದರಿಯರಾದ ಗಂಗಮ್ಮ, ಗೌರಮ್ಮ, ಲಕ್ಷ್ಮೀ, ನನ್ನ ಹಾಗೂ ನನ್ನ ಸಹೋದರ ಬಸವರಾಜ ಇವರ ಮದುವೆಗಳನ್ನು ನನ್ನ ಮೃತ ತಮ್ಮ ಹನಮಂತ್ರಾಯ ಹಾಗೂ 1 ನೇ ವಾದಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಮ್ಮ ಮೊದಲನೇ ಹೆಂಡತಿ ವಸಂತ ಇವರಿಗೆ ಎಷ್ಟು ಮಕ್ಕಳು ಎಂದು ಹೇಳಿದ್ದಕ್ಕೆ ಸಾಕ್ಷಿ ಸದರಿಯವರು ತಮ್ಮ ಒಬ್ಬಳೇ ಹೆಂತಿಯಾಗಿದ್ದು ತಮಗೆ ಇಬ್ಬರು ಮಕ್ಕಳು ಇರುವುದಾಗಿ ಹೇಳುತ್ತಾರೆ. ನನ್ನ ಸದರಿ ಹೆಂಡತಿ ನಗರಸಭೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ನನ್ನ ಎರಡನೇ ಹೆಂಡತಿ ಲಕ್ಷ್ಮೀ ಎಂದು ಇದ್ದು ಅವರಿಂದ ನನಗೆ ಮೂರು ಮಕ್ಕಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಲಕ್ಷ್ಮೀ ಹಾಗೂ ಅವರ

ಸದರಿ ಮೂರು ಜನ ಮಕ್ಕಳು ಶಹಾಪೂರಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಪ್ರಸ್ತುತ ಪ್ರಕರಣದಲ್ಲಿ ದಾಖಲು ಮಾಡಿದ ದಾಖಲೆಗಳನ್ನು ನಾನು ನನ್ನ ಮಾನ್ಯ ವಕೀಲರ ಕಚೇರಿಯಲ್ಲಿ ಅವುಗಳನ್ನು ನೋಡಿರುತ್ತೇನೆ ಎಂದರೆ ಸರಿ. ನಿಪಿ.21 ರ ಎರಡನೇ ಪುಟದಲ್ಲಿ ಸದರಿ ನನ್ನ ಮೃತ ತಮ್ಮ ಇವರು ವಾದಿಗಳ ಹೆಸರನ್ನು ಸೇರಿಸಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಾವು ಸದರಿ ದಾಖಲೆಯನ್ನು ನೋಡಿದಂತೆ ತಮ್ಮ ತಮ್ಮ 1 ಮತ್ತು 2 ನೇ ಪ್ರತಿವಾದಿ ಹೆಸರುಗಳನ್ನು ತೊರಿಸಿದ್ದು ನಂತರ ವಾದಿಗಳ ಹೆಸರನ್ನು ನಮೂದು ಮಾಡಲಾಗಿರುತ್ತದೆ ಎಂದು ಹೇಳುತ್ತಾರೆ. ನನ್ನ ಸದರಿ ಮೃತ ತಮ್ಮ ಇವರ service records ನಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಹೆಸರು ಇರುವ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಸದರಿ ಯಾವುದೇ ದಾಖಲೆಯನ್ನು ಸಲ್ಲಿಸದೇ ಇದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ 1 ನೇ ಪ್ರತಿವಾದಿ ಹಾಗೂ ನನ್ನ ಮೃತ ತಮ್ಮ ಹನಮಂತ್ರಾಯ ಇವರು ಯಾವಾಗ ಮದುವೆಯಾಗಿರುತ್ತಾರೆ ಎಂದು ತೋರಿಸಲು ದಿನಾಂಕವನ್ನು ನಮೂದು ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ನಮೂದು ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ನಾನು 2 ಮತ್ತು 3 ನೇ ಪ್ರತಿವಾದಿಗಳ ಜನ್ಮ ದಿನಾಂಕಗಳನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ. 1 ನೇ ವಾದಿ ನನ್ನ ಮೃತ ಹನಮಂತ್ರಾಯ ಇವರ ಮೊದಲನೇಯ ಹೆಂಡತಿಯಾಗಿದ್ದರೂ ಕೂಡಾ ಅವರ ಜಾತಿ ಬೇರೆಯಾಗಿದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಮುಂಚಿತವಾಗಿ ವಾದಿಗಳು ನನಗೆ ನ್ಯಾಯಾ ಪಂಚಾಯತಿ ಮಾಡಲು ಕೇಳಿಕೊಂಡಿದ್ದರು ಕೂಡಾ ನಾವು ಅವರಿಗೆ ತೊಂದರೆ ಕೊಡಲು ಯಾವುದೇ ಪಂಚ್ತಾಯಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ

ವಾದಿಗಳು ನನ್ನ ಸದರಿ ಮೃತ ತಮ್ಮ ಇವರ ಮಕ್ಕಳಾಗಿರುತ್ತಾರೆ ಎಂದು ನನಗೆ ಗೊತ್ತಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸದರಿ ಮೃತ ತಮ್ಮ ಹನಮಂತ್ರಾಯ ಇವರಿಗೆ ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನು ಮತ್ತು ಅನುಕಂಪದ ನೌಕರಿ ವಾದಿಗಳಿಗೆ ಬರುವುದರಿಂದ ಅದನ್ನು ತಪ್ಪಿಸಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು.ಪ್ರ.ದ.ನ್ಯಾ.ದಂ. ಶಹಾಪೂರ.